ಕೆಲಸಕ್ಕೆ ಹೋಗದವರು, ಬಾಳಾ ದಿನದ ಮೇಲೆ ತಿರುಗಿ ಊರಿಗೆ ಬಂದವರು, ಬಾವಿ ಹತ್ತಿರ ಅವರೊಂದು ಇವರೊಂದು ಮಾತನಾಡುತ್ತಾ ಬಂದು ಸೇರಿದರು. ಹಿಂಗೇ ಮಾತಾಡ್ತಿರ್ವಾಗ ನೆನ್ನೆಯ ಮದುವೆ ವಿಷಯ ಅಲ್ಲಿಗೆ ಹರಿದು ಬಂದು, 'ಬೂಂದೀನ ಬೊಗಸೇಲಿ ತುಂಬಿ ತುಂಬಿ ಹಾಕುತ್ತಿದ್ರು, ಇಷ್ಟು ವರ್ಷದಲ್ಲಿ ಅಂಗಾಕಿದ್ನ ನಾನ್ಯಾರ ಮದುವೆಲ್ಲೂ ಕಾಣೆ' ಅಂದ ಲೋಕ. ಆ ಮಾತಿಗೆ ಥಟ್ಟಂತ, 'ಊಟ ಯಂಗಾರ ಆಕ್ಲಿ, ಹುಡುಗಿ ಯಂಗವಳೆ ಹೇಳ್ರಿ' ಅಂತ ಕೇಳಿದ ಪ್ರಭ. 'ನಿಜಕ್ಕೂ ಹೆಣ್ಣು ಮಾತ್ರ ಮೈ ಹಿಂಡಿದ್ರೆ ಹಾಲ್ ಬರುತ್ತೆ ಅಷ್ಟು ಬೆಳ್ಳಗವ್ಳೆ' ಅಂದ ಲೋಕನು, 'ಹಸೆ ಮಣೆಮೇಲೆ ಕುಂತಾಗ ನಿಜವಾಗ್ಲೂ ದೇವರ ರೀತಿ ಕಾಣುತ್ತಿದ್ರು' ಎಂದನು.

ಅತ್ತಿಂದ ಬಂದ ಶಂಕ್ರಣ್ಣ 'ಏನುರ್ಲ ಪಾಪ' ಅಂತ ಬಂದೋನು, ಮಧ್ಯ ಬಾಯಾಕಿ ಲೋಕಾರೂಢಿ ಮಾತು ತೆಗೆದೋನು, ಆ ಬಾವಿ ಕಲ್ಲಿಗೆ ಒರಗಿ ಚಡ್ಡಿ ಜೋಬಿಂದ ಬೀಡಿಯೊಂದನ್ನು ಹೊರತೆಗೆದು ಹಚ್ಚಿದ. ಆ ಬೀಡಿ ಘಾಟು ಪ್ರಭಾ ಮೂಗಿಗೆ ಬಡಿದಿದ್ದರಿಂದ ಕೈಯಲ್ಲಿ ಗಾಳಿ ಬೀಸಿಕೊಂಡು ಅತ್ತ ವಾರಾಸಿ ನಿಂತ. ಆ ಕೋಟೆ ಕಿರುದಾರಿಯಲ್ಲಿ ಬರುತ್ತಿದ್ದ ದ್ಯಾವಕ್ಕ ಕಲ್ಲೆಡವಿ ಮುಗ್ಗರಿಸಿದ್ದನ್ನು ನೋಡಿದರು. ಅವರು ಅಯ್ಯಯ್ಯೋ ಎಂದು ಮರುಗಿ ಸಹಾಯಕ್ಕೆ ಓಡಿದರು. ಅಷ್ಟು ಹೊತ್ತಿಗೆ ಅವಕ್ಕ ಎದ್ದು ಕುಳಿತಿತ್ತು. 'ಅಕೋ ಮೆಲ್ಲಗೆ ನೋಡ್ಕ ಹೋಗಕ್ಕ' ಅಂದರೆ, ದ್ಯಾವಕ್ಕ 'ಅಯ್ಯೋ, ನಂದೆಂಗಾರ ಆಗ್ಲಿ... ನನ್ನುಡುಗನ್ನ ಕಂಡ್ರೇನ್ರಪ್ಪ' ಅಂದಳು. 'ಬೆಳಕು ಮೂಡಲಿಕ್ಕೆ ಸೂರ್ಯನಿಲ್ಲದಂತಾಗಿ ಎದೆಯಲ್ಲಿ ಚಾಕು ಚುಚ್ಚಿದಂತಾಗಿದೆ. ನಾವೆಲ್ಲ ಮದುವೆಗೆ ಹೋಗಿದ್ವಲ್ಲಾ, ಅದ್ಕೆ ನಮಗೆ ಏನೂ ಗೊತ್ತಾಗ್ಲಿಲ್ಲ' ಅಂದರು ಹುಡುಗರು. ಎಲ್ಲೋದ ಎನ್ನುವ ಗೊಂದಲ ಇವರಿಗೂ. ಆ ಮಾತಿನಿಂದ ಅತ್ತಿತ್ತ ಚಲಿಸಲು ಜಾಗವೂ ಇಲ್ಲದಂತೆ ಚಡಪಡಿಸಿ ಹೋದಳು.

ಅರ್ಧ ಫರ್ಲಾಂಗ್ ದೂರದ ಆ ಕೋಟೆ ಬೀದಿ ದಿಕ್ಕಿನಲ್ಲಿ ಕಾಣಿಸಿಕೊಂಡ ಹೆಗ್ಡೇರ್ ರವಿ ಜೋರು ದನಿಯಲ್ಲಿ, 'ಏ ಪ್ರಭಾ' ಎಂದು ಕೂಗು ಹಾಕಿದ. ಆ ಜೋರು ದನಿಗೆ ಅತ್ತ ನೋಡಿದ ಪ್ರಭಾ ಪಕ್ಕದಲ್ಲೇ ಇದ್ದ ಶಂಕ್ರಣ್ಣನಿಗೆ, 'ನೋಡು ಶಂಕ್ರಣ್ಣ, ಆ ಮಗ ನೋಡಿದ್ರೆ ರಸ್ತೇಲಿ ನಮ್ಮಡಿಕೇ ಬರ್ತಾ ಇರೋದು, ಅವನು ಕೂಗದ ನೋಡಿದ್ರೆ ಎಲ್ಲೋ ದೂರದಲ್ಲಿರುವವರನ್ನ ಕೂಗಿ ಕರೆದಂತೆ ಕರೀತಾನೆ, ಇದೇನು ನಮಗೆ ಅರ್ಥ ಆಗಲ್ವಾ? ಆ ನನ್ಮಗ ಕೆಳಗಲ ಮನೆಯ ಪಾರ್ವತಿಗೆ ಕೇಳಲಿ ಅಂತ ಯಂಗೆ ಕೂಗ್ತಾವ್ನೆ' ಅಂದನು. ಪ್ರಭಾನ ಬಾಯಿಂದ ಬಂದ ಆ ಮಾತಿಗೆ ಬೆಚ್ಚಿದ ಶಂಕ್ರನು 'ಸುಮ್ಕಿರೋ... ಹಾದಿಲೋಗೋ ಯಾರ ಕಿವಿಗಾದ್ರೂ ಬಿದ್ದಾತು' ಎಂದು ಪಿಸುದನಿಯಲ್ಲಿ ಹೇಳಿ ಗಾಬರಿಯಿಂದ ಸುತ್ತಮುತ್ತ ಕಣ್ಣು ಹೊರಳಿಸಿದನು. ಅಲ್ಲಿ ಯಾರೂ ಓಡಾಡದಿದ್ದುದನ್ನು ಕಂಡು 'ಅಯ್ಯೋ ನನ್ಮಗನೆ, ಯಾರೆಂಗಾದ್ರೂ ಆಗ್ಲಿ ನೀವು ಮಾತ್ರ ಇಂಥದ್ದಕ್ಕೆಲ್ಲ ಹೋಗ್ಬೇಡ್ರಿ ಕಂಡ್ರಪ್ಪ, ಈಗ ಬಾಯಿಗೆ ಬಂದ ಮಾತು ರೂಢಿಯಾಗಿ ಹಿಂದೆ ಮುಂದೆ ಯೋಚಿಸದೆ ನುಗ್ಗಿ ಬರುತ್ತವೆ ಹುಷಾರು' ಎಂದು ಅಲ್ಲಿದ್ದ ಹುಡುಗರ ಎಚ್ಚರಿಸಿದನು.

ಅಲ್ಲಿ ನಿಂತು ಏನೇನೋ ಮಾತಾಡುತ್ತಿದ್ದ ಹುಡುಗರತ್ತ ಅದೇ ದಾರಿಯಲ್ಲಿ ಬಂದ ಚೊಟ್ಟ ನಿಂಗನು ಶಂಕ್ರಣ್ಣನನ್ನು ಮಾತನಾಡಿಸುತ್ತಾ ಬಂದು 'ಏನ್ಲಾ ಶಂಕ್ರ ಎಲ್ಲೂ ಹೋಗ್ಲಿಲ್ವಾ' ಎಂದು ಅವನಿಂದ ಬೀಡಿ ಕೇಳಿ ಹಚ್ಚಿದನು. ಅಂಗೆ ಹೊಗೆ ಎಳೆಯುತ್ತಾ ಬಿಡುತ್ತಾ ಶಂಕ್ರಣ್ಣ–ನಿಂಗಣ್ಣ ಇಬ್ಬರ ನಡುವೆ ಮಾತು ಮುಂದುವರಿದಿತ್ತು. ಆ ಮಾತಿನ ಮಧ್ಯೆ ನಂಜಣ್ಣನ ಹಂದಿ ವಿಚಾರವೂ ಬಂದು, ಅಲ್ಲ... ಆ ಮಲ್ಲ ಹಂದಿ ಸಿಗ್ಲಿಲ್ಲ ಅಂತನ್ನುವ ವಿಚಾರ ಗೊತ್ತಾಗಿ 'ಸಿಗ್ದಿದ್ರೆ ಒಳ್ಳೇದು, ಅದ್ನ ಕುಯ್ದು ತಿಂದಿದ್ರೆ ಯಾರೂ ಈ ಬೀದೀಲಿ ಓಡಾಡಂಗಿರ್ಲಿಲ್ಲ' ಅಂದದ್ದು ಊರ ಸುದ್ದಿಯಾಗಿ, ತಿನ್ನುಣ್ಣೋ ಜಾತಿಯ ಮಲ್ಲನು ಅವಮಾನಿಸಿದಂತೆ ಕೂಡ ಆಗಿತ್ತು. ಇದನ್ನ ಅಂಗೇ ಬಿಡಬಾರ್ದು, ಮಲ್ಲ ಸಿಕ್ಕಿದಾಗ ಕೇಳಲೇಬೇಕು ಅವನು ತೀರಾ ಜಾತಿಗೆ ಕಚ್ಚಿಕೊಂಡು ಜೋತಾಡುತ್ತಾನೆ.

ಬೀಡಿ ಮೋಟನ್ನು ಬಾವಿ ಕಟ್ಟೆಗೆ ಅದುಮಿ ಹೊಸಕಿ ಹಾಕುತ್ತಾ 'ಲೇ ಶಂಕ್ರ ಬಂದೇ ಇರು, ಆ ಮಲ್ಲುನ್ನ ಇವತ್ತು ಕೇಳ್ದೆ ನಾನ್ ಬಿಡಲ್ಲ' ಅಂತಂದು, ಅತ್ತ ಆ ಕಟ್ಟೆ ಏರಿಕಡೆಗೆ ಅದೇನೋ ಕಂಡವನಂತೆ ಹೊರಟನು. ಬೀದಿ ದನಗಳು ಹಾಕಿ ಹೋಗಿದ್ದ ಸಗಣಿ ಎತ್ತಿ ಪಕ್ಕದಲ್ಲಿ ಇದ್ದ ತಿಪ್ಪೆಗೆ ಎಸೆದನು. ಆ ಬಯಲಲ್ಲಿ ನಿಂತ ನಿಂಗನ ಕಣ್ಣುಗಳು ಎದುರುಗಿದ್ದ ತೋಟಗಳ ಸಾಲುಗಳತ್ತ ಸರಿದು ದಿಗಂತದವರೆಗೆ ಹರಡಿಹೋಗಿದ್ದ ಆ ಅಚ್ಚ ಹಸಿರನ್ನು ಕಣ್ಣಿಗೆ ಕಟ್ಟಿಕೊಳ್ಳುತ್ತಾ ಅಲ್ಲೇ ನಿಂತುಬಿಟ್ಟಿದ್ದ. ಈ ಅಪಮಾನದ ಜೀವಕ್ಕೆ ಆಗ ಅಪಮಾನ ಕಾಡಲಿಲ್ಲ. ಆಕಾಶದಲ್ಲಿ ಕೆಂಪು ರಥ ಹೊರಟಂತೆ ಅವನ ಮಾತು ಸುಳ್ಳಾಗಲಿ. ಸಪ್ತ ಸಮುದ್ರದಾಚೆಯ ಮನುಷ್ಯ ಮನಸುಗಳ ಒಂದು ಮಾಡಲಿ ಎಂದು ಕಣ್ಣು ಬಿಟ್ಟಿದ್ದ. ತಮ್ಮನ ಕೆರೆಯ ಓಣಿಯಲ್ಲಿ ಬರುತ್ತಿದ್ದ ಊರ ದಾಸಪ್ಪ ಶಂಕರಶೆಟ್ಟಿ 'ಇದೇನ್ ನಿಂಗ ಇಲ್ಲಿ ತಿಪ್ಪೆ ಮಾಡಿರಂಗಿದಿಯಾ?' ಅಂತ ಕೇಳುತ್ತಾ ಮುಂದೆ ಬಂದನು. ತಟ್ಟನೆ ಎಚ್ಚರಾದ ನಿಂಗನು ತನ್ನ ತಾ ಮರೆತ ಸ್ಥಿತಿಯಿಂದ ಹೊರಬಂದು 'ಅಯ್ಯೋ ನನ್ನ ದೇವ್ರೇ ನನ್ನ ತಿಪ್ಪೆ ಇಲ್ಲೆಲ್ಲೈತೆ? ನನ್ನಟ್ಟನೇ ತಿಪ್ಪೆಯಾಗಿ ಕುಂತೈತೆ' ಎಂದನು. 'ಯಾರ್ದೋ ತಿಪ್ಪಿಗೆ ನೀನು ಸಗಣಿ ಆಕಿದ್ಯಲ್ಲ, ಅದ್ಕೆ ಕೇಳ್ದೆ'. ಆ ಮಾತ್ಗೆ ನಿಂಗನು 'ತಿಪ್ಪೆ ಯಾರ್ದಾರ್ದ್ರೇನು? ಅದೂ ಭೂಮ್ ತಾಯಿ ಮಡ್ಲಿಗೇ ತಾನೇ ಹೋಗದು. ನಾನು ಅಲ್ಲಾಕಿದ ಸಗಣಿ ಗೊಬ್ಬರದಿಂದ ಈ ನೆಲ ಎರಡ್ ಸೆರೆ ಬೆಳೆ ಜಾಸ್ತಿ ಕೊಟ್ರೆ, ನನ್ಗೂ ಒಂದ್ ಸೆರೆ ಕೊಡು ಅನ್ನಬೋದು. ಹೊಲದವನಿಗೇ ಒಂದ್ ಸೆರೆ ಕಮ್ಮಿ ಆಯ್ತು ಅಂತಿಟ್ಕಳಿ. ಅವನ್ಗೇ ಇಲ್ಲದ್ನ ನಮ್ಗೇನ್ ಕೊಡ್ತನೆ' ಅಂದನು. ನಿಂಗನ ಸ್ವಾರ್ಥವೇ ಇಲ್ಲದ ಆ ಮಾತಿನಿಂದ ಶಂಕರಶೆಟ್ಟಿ ತಿಳಿಯಾದ ನದಿ ನೀರಿನಂತಾಗಿ ಹೌದು ಪ್ರೀತಿ ಇರುವುದೇ ಇಂಥ ನಡೆಯಲ್ಲಿ ಎಂದು ಅರ್ಥವಾಗಿ ತಪ್ಪಿತಸ್ಥ ಭಾವದಲ್ಲಿ ಅತ್ತ ಹೋದ.

* * *

ತ್ಯಾಗ ಎಲ್ಲಿ ಹುಡುಕಿದರೂ ಸಿಗದಿದ್ದುದು, ಒಂದು ಸಣ್ಣ ಅನುಮಾನವನ್ನ ಗವಿರಂಗಣ್ಣನಿಗೆ ಹುಟ್ಟಿಹಾಕಿತ್ತು. ತುಮಕೂರಿಗೆ ಸೇರಿಸುತ್ತಾರೆಂದು ಈ ಹುಡುಗ ಎಲ್ಲಾರ ಹೋಯಿತಾ? ಅನ್ನಿಸುತ್ತಾ ದೇವಕ್ಕನ ಕಡೆಗೆ ತಿರುಗಿ 'ಅಮ್ಮಾ ನಿನ್ ತೌರ್ಮನೆಕಡಿಕೆ ಏನಾರ...?' ಎಂದು ಕೇಳಿದನು. 'ಅಲ್ಲೂ ಇಲ್ವಂತೆ ಕಣಪಾ, ನನ್ನ ತಂಗಿ ಮಗ ವರ್ತಮಾನ ಕೊಟ್ಟ' ಅನ್ನುತ್ತ ತನ್ನ ದುಃಖದ ಕಣ್ಣೀರ ಸೆರಗಲ್ಲಿ ವರೆಸಿಕೊಂಡಳು. ಊರೂರು ತಿರುಗುವ ಶಂಕರ ಶೆಟ್ಟಿ ಎರಡು ಮೂರು ವಾರದಿಂದ ಹಸಿವೆ ಚೀಲ, ಶಂಖ, ಜಾಗಟೆ, ಭವನಾಶಿ ಹೊತ್ತು ಬಾಣಾವರ, ಚಿಕ್ಕ ತಿರುಪತಿ, ಮಾಡಾಳು, ಮೇಟಿಕುರಿಕೆ ಎಲ್ಲೆಲ್ಲೋ ದಾಸಪ್ಪನಾಗಿ ತಿರುಗಿ ಹೋಗಿ ಬಂದವನು ಮೇಟಿಕುರಿಕೆಯಲ್ಲಿ ಸಿಕ್ಕಿದ ಹೆಂಗಸೊಬ್ಬಳು ದಾಸಪ್ಪನ ಊರು ಪ್ರಸ್ತಾಪಕ್ಕೆ ಬಂದಾಗ ಆ ಊರಿನ ಗವಿರಂಗಣ್ಣ ಆಕೆಗೆ ನೆನಪಾಗುತ್ತಾರೆ. ಅವರೊಡನೆ ಆಕೆಗಿದ್ದ ಸ್ನೇಹ ಸಂಬಂಧ ಹೇಳುತ್ತಾ ಅವರ ಆರೋಗ್ಯ ವಿಚಾರಿಸಿದ್ದಳು. ಇದು ನೆನಪಾಗಿ ಶಂಕರಶಟ್ಟಿಯು ಗವಿರಂಗಣ್ಣನ ಮನೆಯತ್ತ ಬಂದನು. 'ಅಣ, ಅಣೋ, ಗವಿರಂಗಣ್ಣ' ಎಂದು ಕೂಗಿ 'ಮೇಟಿಕುರಿಕೆಯಲ್ಲಿ ಸಿಕ್ಕಿದವರೊಬ್ಬರು ನಿಮ್ಮ ಯೋಗಕ್ಷೇಮ ವಿಚಾರಿಸಿದರು' ಎಂದು ಹೇಳಿದ. ತಕ್ಷಣಕ್ಕೆ ಗವಿರಂಗಣ್ಣನಿಗೆ ಆ ಹೆಂಗಸಿನ ಹೆಸರು ನೆನಪಾಗದೆ ತಡಕಾಡುತ್ತಿದ್ದರು. ಇದನ್ನು ಗಮನಿಸಿದ ಶಂಕರಶೆಟ್ಟಿಯು 'ಕೋಲು ಮುಖ, ಎಡಗೆನ್ನೆಯ ಮೇಲಿನ ಮಚ್ಚೆ, ಉದ್ದನೆ ಮೂಗು, ಉದ್ದನೆಯ ಜಡೆ...' ಎಂದು ವಿವರಿಸುತ್ತಿದ್ದಂತೆ ಗವಿರಂಗಣ್ಣನಿಗೆ ತಟ್ಟನೆ ನೆನಪಾಯಿತು. 'ಓ ನಮ್ಮ ನಾಗು, ನನ್ನ ಕ್ಲಾಸ್‌ಮೇಟ್ ಕಣ ಹೇಳು' ಅಂದನು. ಅಲ್ಲಿನ ಆ ಹೆಣ್ಣುಮಗಳು ಮಾಡಿದ ಸತ್ಕಾರ, ಊಟೋಪಚಾರ ಎಲ್ಲವನ್ನೂ ಹೇಳಿದ ಶಂಕರಶೆಟ್ಟಿ ಆಕೆಯನ್ನು ಬಹಳವೇ ಕೊಂಡಾಡಿದ. ಅವಳು ಅತ್ಯಂತ ಸುಂದರಿಯಾಗಿದ್ದು ಅಪರೂಪಕ್ಕೆ ಎನ್ನುವಂತೆ ನನ್ನ ಜೊತೆ ಸಲಿಗೆಯಿಂದ ಮಾತನಾಡುತ್ತಾ ಸ್ನೇಹ ಇಟ್ಟುಕೊಂಡಿದ್ದಳು. ಇದು ಬೇರೆ ಬೇರೆ ಅರ್ಥಕ್ಕೂ ಕಾರಣವಾಗಿ ಹುಡುಗರು ರೇಗಿಸುವ ಹಂತಕ್ಕೂ ಹೋಗಿತ್ತು. ಒಮ್ಮೆ ನಮ್ಮ ಮನೆಗೂ ಬಂದಿದ್ಲು. ಆ ಸುಂದರ ಹೆಣ್ಣು ಮಗಳು ನಮ್ಮ ಮನೆಗೆ ಬಂದು ಹೋಗಿದ್ದನ್ನ ನೋಡಿದ ನಮ್ಮೂರ ಜನ ಈಗಲೂ ಮಾತನಾಡಿಕೊಳ್ಳುವುದನ್ನ ಕೇಳಿದ್ದೇನೆ. ಇದು ನಮ್ಮಪ್ಪ ಅವ್ವನಿಗೂ ಅನುಮಾನ ಹುಟ್ಟುಹಾಕಿತ್ತು. ನಮ್ಮ ಓದು ಮುಗಿದ ಮೇಲೆ ನಾವೆಂದೂ ಮತ್ತೆ ಪರಸ್ಪರ ಭೇಟಿಯಾಗಿದ್ದಿರಲಿಲ್ಲ. ಅದೊಂದು ಸ್ಮರಣೆಮಾತ್ರವಾಗಿ ಉಳಿದುಹೋಗಿತ್ತು. ನಿನ್ನ ವಿವರ ಅದನ್ನೆಲ್ಲ ಮತ್ತೆ ನೆನಪಿಗೆ ತಂದುಕೊಡ್ತು' ಅಂದ ಗವಿರಂಗಣ್ಣ. 'ಏ ಊರೇನ್ ಬಿಡಣ್ಣ ಏನಾರ ಮಾತಾಡ್ಕಳುತ್ತೆ, ಆ ತಾಯಿ ಮುಖ ನೋಡಿದ್ರೆ ಕೈ ಎತ್ತಿ ಮುಗಿಯಂತವ್ಳೆ, ನಿಂದೂ ಅವರದ್ದೂ ಯಂಥಾ ಸಂಬಂಧ ಅಂತ ಅಲ್ಲೇ ಗೊತ್ತಾಗೋಗುತ್ತೆ' ಎಂದ ಶಂಕರಶೆಟ್ಟಿ.

(ಸಶೇಷ)